ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - 560 001

ಸಂಖ್ಯೆ: ಸಶಿಅ/ಸಿ1/ಕಂ.ಪ್ರೋ.ಹೈರ್/57/2013-14 ದಿನಾಂಕ: 17.03.2014

## ಸುತ್ತೋಲೆ

ವಿಷಯ: ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಖಾಸಗಿ ಅರ್ಹ ಸಂಸ್ಥೆಯ ಮೂಲಕ ಹೊರಗುತ್ತಿಗೆಯ ಆಧಾರದಲ್ಲಿ ಪಡೆದುಕೊಳ್ಳಲು ಜಿಲ್ಲಾ ಉಪನಿರ್ದೇಶಕರಿಗೆ ಅಧಿಕಾರ ನೀಡುವ ಬಗ್ಗೆ.

******

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ನಿರ್ವಹಣೆಗಾಗಿ 2013-14ನೇ ಸಾಲಿನಲ್ಲಿ 29 ಜಿಲ್ಲಾ ಕಛೇರಿಗಳಿಗೆ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು M/s. Asain Security & Personnel Arrangements, Hubli ಸಂಸ್ಥೆಯ ಮೂಲಕ ಹೊರಗುತ್ತಿಗೆಯ ಆಧಾರದ ಮೇಲೆ ಕೇಂದ್ರ ಕಛೇರಿಯು ಒದಗಿಸುತ್ತಿದೆ. ಹೊರಗುತ್ತಿಗೆ ಅವಧಿಯು ದಿನಾಂಕ 31.03.2014 ಕ್ಕೆ ಮುಕ್ತಾಯವಾಗಲಿದೆ. ಆದರೆ, ಸದರಿ ಸಂಸ್ಥೆಯು ತನ್ನ ಸಿಬ್ಬಂದಿಗೆ ನಿಗದಿತ ಕಾಲದಲ್ಲಿ ಸಂಭಾವನೆಯನ್ನು ನೀಡದಿರುವ ಬಗ್ಗೆ ಕೇಂದ್ರ ಕಛೇರಿಗೆ ದೂರುಗಳು ಬಂದಿದ್ದು, ಈ ಬಗ್ಗೆ ಸದರಿ ಸಂಸ್ಥೆಗೆ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಿದಾಗ ಜಿಲ್ಲಾ ಹಂತದಿಂದ ತನ್ನ ಸಿಬ್ಬಂದಿಯ ಹಾಜರಾತಿ ದೃಢೀಕರಣವು ಬರುವುದು ವಿಳಂಬವಾಗುತ್ತಿದೆಯೆಂದು, ಇದರಿಂದ ಸಂಭಾವನೆಯ ಪಾವತಿಯಲ್ಲಿ ವಿಳಂಬವುಂಟಾಗಿ, ಸಂಬಂಧಿಸಿದಂತೆ ಬಿಲ್ಲನ್ನು ಹಣ ಬಿಡುಗಡೆಗಾಗಿ ಸಲ್ಲಿಸುವಲ್ಲಿ ವಿಳಂಬವಾಗುತ್ತಿದೆಯೆಂದು ತಿಳಿಸಿರುತ್ತಾರೆ. ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ನಿಗದಿತ ಕಾಲದಲ್ಲಿ ಸಂಭಾವನೆಯು ದೊರಕದೇ ಇದ್ದಲ್ಲಿ ಅವರ ಸೇವಾ ಗುಣಮಟ್ಟವು ಕುಂಠಿತವಾಗುವ ಸಂಭವವಿರುತ್ತದೆ. ಆದರೆ, ಜಿಲ್ಲಾ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ಸಮರ್ಪಕ ಕರ್ತವ್ಯ ನಿರ್ವಹಣೆಯ ಹಾಜರಾತಿ ದೃಢೀಕರಣವನ್ನು ಮನವರಿಕೆ ಮಾಡಿಕೊಳ್ಳದೆ ಹೊರಗುತ್ತಿಗೆ ಸಂಸ್ಥೆಗಳ ಸಂಭಾವನೆಯ ಬಿಲ್ಲುಗಳನ್ನು ಪಾವತಿಗೆ ಪರಿಗಣಿಸಲು ಬರುವುದಿಲ್ಲ. ಆದ್ದರಿಂದ ಸಂಸ್ಥೆಯು ತನ್ನ ನೌಕರರಿಗೆ ಸಕಾಲದಲ್ಲಿ ಸಂಭಾವನೆಯನ್ನು ಪಾವತಿಸಲು ಅಗತ್ಯವಾದ ಕರ್ತವ್ಯ ನಿರ್ವಹಣೆಯ ಹಾಜರಾತಿ ದೃಢೀಕರಣವನ್ನು ಹಾಲಿ ನೌಕರರು ಸೇವೆ ಸಲ್ಲಿಸುತ್ತಿರುವ ಜಿಲ್ಲಾ ಹಂತದಿಂದ ತ್ವರಿತವಾಗಿ ನೀಡಲು, ನಂತರ, ಸಂಸ್ಥೆಯು ಸಲ್ಲಿಸುವ ಬಿಲ್ಲನ್ನು ಪರಿಶೀಲಿಸಿಕೊಂಡು, ಜಿಲ್ಲಾ ಹಂತದಲ್ಲಿಯೆ ಪಾವತಿಗೆ ಕ್ರಮವಹಿಸಿದಲ್ಲಿ ಅನಗತ್ಯವಾಗಿ ಉಂಟಾಗುವ ವಿಳಂಬವನ್ನು ತಡೆಗಟ್ಟುವುದು ಸಾಧ್ಯವಿದೆಯೆಂಬುದನ್ನು ಗಮನಿಸಿದೆ. ಈ ಹಿನ್ನೆಲೆಯಲ್ಲಿ 2014-15ನೇ ಸಾಲಿನಿಂದ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಅರ್ಹ ಖಾಸಗಿ ಸಂಸ್ಥೆಗಳಿಂದ ಹೊರಗುತ್ತಿಗೆಯ ಮೂಲಕ ಪಡೆಯಲು ಜಿಲ್ಲಾ ಹಂತಕ್ಕೆ ಅಧಿಕಾರ ವಿಕೇಂದ್ರೀಕರಿಸಿದೆ. ಇದರಂತೆ ಚಾಲ್ತಿಯಲ್ಲಿರುವ ನಿಯಮಗಳನ್ವಯ ಅರ್ಹ ಖಾಸಗಿ ಸಂಸ್ಥೆಯಿಂದ ಹೊರಗುತ್ತಿಗೆಯಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಜಿಲ್ಲಾ ಹಂತದಲ್ಲಿ ಪಡೆಯಲು ಕ್ರಮವಹಿಸುವಂತೆ ಸೂಚಿಸಿದೆ.

***ಜಿಲ್ಲಾ ಹಂತದಲ್ಲಿ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವಾಗ ಈ ಕೆಳಕಂಡ ಅಂಶಗಳನ್ನು ಸ್ಪಷ್ಟವಾಗಿ ಪಾಲಿಸಲು ತಿಳಿಸಿದೆ.***

1) ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಪಾರದರ್ಶಕ ನೀತಿಯನ್ವಯ ಟೆಂಡರ್ ಮೂಲಕ ಅರ್ಹ ಸಂಸ್ಥೆಯಿಂದ ಹೊರಗುತ್ತಿಗೆಯ ಆಧಾರದಲ್ಲಿ ಪಡೆಯಲು ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ಕ್ರಮವಹಿಸುವುದು.

2) ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ವಿದ್ಯಾರ್ಹತೆಯು Bachelor Degree in Engineering in Electronics and Communication or Computer Science or Information Science or Information

Technology or Master in Computer Application (M.C.A) or Bachelor degree in Technology.(B.Tech) ನಿಗದಿಯಾಗಿದೆ.

3) ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ 2014-15ನೇ ವಾರ್ಷಿಕ ಯೋಜನೆ ಅನ್ವಯ ಮಂಜೂರಾಗುವ ಘಟಕ ವೆಚ್ಚದಲ್ಲಿ ಪ್ರತಿ ತಿಂಗಳು ಅಭ್ಯರ್ಥಿಗೆ ಸಂದಾಯವಾಗುವ ನಿವ್ವಳ ವೇತನ, ಸೇವಾ ಶುಲ್ಕ ಹಾಗೂ ಸೇವಾ ತೆರಿಗೆ ಇವುಗಳ ಒಟ್ಟು ಮೊತ್ತವು ಮಂಜೂರಾಗುವ ಘಟಕ ವೆಚ್ಚವನ್ನು ಮೀರದಂತೆ ಕ್ರಮವಹಿಸುವುದು. ಕಂಪ್ಯೂಟರ್ ಪ್ರೋಗ್ರಾಮರ್‌ಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವುದನ್ನು ಖಚಿತ ಪಡಿಸಿಕೊಂಡು, ಹಾಜರಾತಿ ಪರಿಶೀಲಿಸಿ, ಕರಾರು ಪ್ರಕಾರ ಸಂಭಾವನೆ ಪಾವತಿಸಲು ಕ್ರಮಕೈಗೊಳ್ಳುವುದು.

4) ಶಾಸನಬದ್ಧ ವಂತಿಗೆಗಳನ್ನು ಸಂಬಂಧಿತ ಇಲಾಖೆಗಳಿಗೆ ಜಮೆ ಮಾಡಿದ ಬಗ್ಗೆ ಖಾತರಿ ಪಡಿಸಿಕೊಂಡು ಮುಂದಿನ ತಿಂಗಳ ಸಂಭಾವನೆಯನ್ನು ಟೆಂಡರ್‌ದಾರರಿಗೆ ಬಿಡುಗಡೆ ಮಾಡಬೇಕು.

5) ಟೆಂಡರ್ ಪ್ರಕ್ರಿಯೆಯ ಅವಧಿಯು ಆಯಾ ವರ್ಷದ ಮಾರ್ಚ್ ಅಂತ್ಯದವರೆಗೆ ಮಾತ್ರ ಇರುತ್ತದೆ.

6) ಒಂದು ತಿಂಗಳ ಪೂರ್ಣಾವಧಿಯ ಕಾರ್ಯವನ್ನು ನಿರ್ವಹಿಸಿದ ನಂತರ ಒಂದು ದಿನದ ರಜೆ ನೀಡಲು ಅವಕಾಶ ಕಲ್ಪಿಸುವುದು.

7) ಕೊಪ್ಪಳ, ಗದಗ್, ಉಡುಪಿ, ಮಂಗಳೂರು, ಮಡಿಕೇರಿ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಮಂಡ್ಯ, ಬೆಂಗಳೂರು ದಕ್ಷಿಣ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಕೋಲಾರ, ತುಮಕೂರು, ಬೀದರ್, ಕಾರವಾರ, ಬಾಗಲಕೋಟೆ, ಬಿಜಾಪುರ, ರಾಮನಗರ, ಮಧುಗಿರಿ, ಯಾದಗಿರಿ, ಸಿರ್ಸಿ, ಚಿಕ್ಕಬಳ್ಳಾಪುರ, ಚಿಕ್ಕೋಡಿ, ಧಾರವಾಡ, ಮೈಸೂರು, ಬಳ್ಳಾರಿ, ಬೆಂಗಳೂರು ಉತ್ತರ ಈ 29 ಜಿಲ್ಲೆಗಳಲ್ಲಿ ಮಾತ್ರ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆ ಪಡೆಯಬಹುದು.

8) ಪ್ರಸ್ತುತ ಅವಧಿಯಲ್ಲಿ 2014ರ ಲೋಕಸಭಾ ಚುನಾವಣೆಗಳಿರುವುದರಿಂದ ಚುನಾವಣೆ ನೀತಿ ಸಂಹಿತೆಯು ಮುಕ್ತಾಯಗೊಂಡ ನಂತರ ಟೆಂಡರ್ ಪ್ರಕಟಣೆಗೆ ಕ್ರಮವಹಿಸಲು ತಿಳಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ.

ಗೆ,

1) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ.

*ಪ್ರತಿ ಗೌರವಗಳೊಡನೆ.*

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್.

*ಪ್ರತಿ:*

4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ.
5) ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕ ಪತ್ರ ಶಾಖೆ, ಸಶಿಅ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6) ರಾಜ್ಯ ಯೋಜನಾ ನಿರ್ದೇಶಕರು / ನಿರ್ದೇಶಕರು (ಕಾ) ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
7) ಸಹನಿರ್ದೇಶಕರು (ಆ) / (ಗು) / (ಕಾ) ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
8) ಕಛೇರಿ ಪ್ರತಿ.